# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **937+951+972** |
| **ಮಾನ್ಯ ಸದಸ್ಯರುಗಳ ಹೆಸರು** | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) ಮತ್ತು ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದರು) ಹಾಗೂ ಶ್ರೀ ಎಸ್.ವಿ.ಸಂಕನೂರು (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | 11.03.2026 |
| **ಉತ್ತರಿಸುವ ಸಚಿವರು** | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ/ಕಲ್ಯಾಣ ಕರ್ನಾಟಕ ಭಾಗದಲ್ಲಿ ಸರ್ಕಾರಿ ಪಶುವೈದ್ಯ ಆಸ್ಪತ್ರೆಗಳು, ಪಶು ಚಿಕಿತ್ಸಾಲಯಗಳು ಹಾಗೂ ಮೊಬೈಲ್ ವೆಟರಿನರಿ ಘಟಕಗಳಲ್ಲಿ ಪಶುವೈದ್ಯರು, ಪಶು ನಿರೀಕ್ಷಕರು ಹಾಗೂ ಸಹಾಯಕ ಸಿಬ್ಬಂದಿಗಳ ಅಧಿಕೃತ ಹುದ್ದೆಗಳು ಎಷ್ಟು; ಪ್ರಸ್ತುತ ಖಾಲಿ ಇರುವ ಹುದ್ದೆಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಪಶುಆಸ್ಪತ್ರೆ/ ಪಶು ಚಿಕಿತ್ಸಾಲಯ /ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯರು ಮತ್ತು ಪಶುವೈದ್ಯ ಪರೀಕ್ಷಕರು ಹಾಗೂ ಸಹಾಯಕ ಸಿಬ್ಬಂದಿಗಳ ಹುದ್ದೆಗಳ ಮಾಹಿತಿ ಈ ಕೆಳಕಂಡಂತೆ ಇರುತ್ತದೆ. |

| ವೃಂದ | ಮಂಜೂರು | ಭರ್ತಿ | ಗುತ್ತಿಗೆ/ ಹೊರಗುತ್ತಿಗೆ | ಖಾಲಿ |
|---|---|---|---|---|
| **ಪಶುವೈದ್ಯರು** | 3101 | 1653 | 367 | 1081 |
| ಪಶುವೈದ್ಯ ಪರೀಕ್ಷಕರು ಮತ್ತು ಸಹಾಯಕ ಸಿಬ್ಬಂದಿಗಳು ಸೇರಿ | 12972 | 4297 | 2999 | 5676 |
| **ಒಟ್ಟು** | **16073** | **5950** | **3366** | **6757** |

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಸಂಬಂಧಿಸಿದಂತೆ ಕಲ್ಯಾಣ-ಕರ್ನಾಟಕ ಭಾಗದ 07 ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯರು ಮತ್ತು ಪಶುವೈದ್ಯ ಪರೀಕ್ಷಕರು ಹಾಗೂ ಸಹಾಯಕ ಸಿಬ್ಬಂದಿಗಳ ಹುದ್ದೆಗಳ ಮಾಹಿತಿ ಈ ಕೆಳಕಂಡಂತೆ ಇರುತ್ತದೆ.

| ವೃಂದ | ಮಂಜೂರು | ಭರ್ತಿ | ಗುತ್ತಿಗೆ/ ಹೊರಗುತ್ತಿಗೆ | ಖಾಲಿ |
|---|---|---|---|---|
| **ಪಶುವೈದ್ಯರು** | 620 | 325 | 80 | 215 |
| ಪಶುವೈದ್ಯ ಪರೀಕ್ಷಕರು ಮತ್ತು ಸಹಾಯಕ ಸಿಬ್ಬಂದಿಗಳು ಸೇರಿ | 2415 | 957 | 524 | 934 |
| **ಒಟ್ಟು** | **3035** | **1282** | **604** | **1149** |

ರಾಜ್ಯದ ವಿವಿಧ ಜಿಲ್ಲೆಗಳಿಗೆ ಒಳಪಡುವ ಪಶುವೈದ್ಯರು ಮತ್ತು ಪಶುವೈದ್ಯ ಪರೀಕ್ಷಕರು ಹಾಗೂ ಸಹಾಯಕ ಸಿಬ್ಬಂದಿಗಳ ಹುದ್ದೆಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

| | | |
|---|---|---|
| ಆ | ಕಳೆದ 3 ವರ್ಷಗಳಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಎಷ್ಟು ಪಶು ವೈದ್ಯರನ್ನು ನೇಮಕ ಮಾಡಲಾಗಿದೆ: ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು: | 2024-25ನೇ ಸಾಲಿನಲ್ಲಿ 400 ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿದ್ದು, ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ ಒಟ್ಟು 367 ಪಶುವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>400 ಪಶುವೈದ್ಯಾಧಿಕಾರಿಗಳ ಖಾಯಂ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.<br><br>ಹೆಚ್ಚುವರಿಯಾಗಿ 400 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಇ | ರಾಜ್ಯದಲ್ಲಿ ಎಷ್ಟು ಪಶುವೈದ್ಯ ಆಸ್ಪತ್ರೆಗಳು ಮತ್ತು ಪ್ರಾಥಮಿಕ ಪಶು ಕೇಂದ್ರಗಳು ಪಶುವೈದ್ಯರಿಲ್ಲದೆ ಕಾರ್ಯನಿರ್ವಹಿಸುತ್ತಿವೆ: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಪಶು ವೈದ್ಯರು/ತಾಂತ್ರಿಕ ಸಿಬ್ಬಂದಿಗಳಿಲ್ಲದೆ ಒಟ್ಟು 825 ಪಶುವೈದ್ಯಕೀಯ ಸಂಸ್ಥೆಗಳಿವೆ. ಖಾಲಿ ಇರುವ ಪಶು ವೈದ್ಯಕೀಯ ಸಂಸ್ಥೆಗಳಿಗೆ ಪಶುವೈದ್ಯರನ್ನು ಅಧಿಕ ಪ್ರಭಾರದಲ್ಲಿರಿಸಿ ರೈತರ ಜಾನುವಾರುಗಳಿಗೆ ಯಾವುದೇ ವ್ಯತ್ಯಯವಾಗದಂತೆ ಚಿಕಿತ್ಸಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ.<br><br>ಜಿಲ್ಲಾವಾರು ಸಂಸ್ಥೆಗಳ ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. |
| ಈ | ರೈತರು ಹಾಗೂ ಪಶುಸಂಗೋಪಕರ ಸಮಸ್ಯೆ ಪಶು ವೈದ್ಯರ ಕೊರತೆಯಿಂದಾಗಿ ಪಶು ರೋಗ ನಿಯಂತ್ರಣ, ಲಸಿಕಾ ಕಾರ್ಯಕ್ರಮ, ಹಾಲು ಉತ್ಪಾದನೆ ಹಾಗೂ ರೈತರ ಆದಾಯದ ಮೇಲೆ ಉಂಟಾಗಿರುವ ಪರಿಣಾಮದ ಬಗ್ಗೆ ಸರ್ಕಾರ ಅಧ್ಯಯನ ನಡೆಸಿದೆಯೇ? (ವಿವರ ನೀಡುವುದು) | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ವೈಜ್ಞಾನಿಕವಾಗಿ ಅಧ್ಯಯನ ನಡೆಸಿರುವುದಿಲ್ಲ. ಆದರೆ ಜಾನುವಾರುಗಳಲ್ಲಿ ಕಂಡುಬರುವ ರೋಗಗಳಾದ ಕಾಲು ಬಾಯಿ ಜ್ವರ, ಚರ್ಮ ಗಂಟು, ಚಪ್ಪೆ ರೋಗ, ಗಳಲೆ ಬೇನೆ, ಕರುಳು ಬೇನೆ, ಪಿ. ಪಿ. ಆರ್, ನೀಲಿ ನಾಲಿಗೆ ಇತ್ಯಾದಿ ರೋಗಗಳ ವಿರುದ್ಧ ಕಾಲ ಕಾಲಕ್ಕೆ ಅಗತ್ಯವಾದ ಲಸಿಕೆಗಳನ್ನು ನೀಡಲಾಗುತ್ತಿದೆ.<br><br>ಪ್ರಸ್ತುತ ರಾಜ್ಯದಲ್ಲಿ ಯಾವುದೇ ಗುರುತರವಾದ ರೋಗೋದ್ರೇಕ (Out Break) ಗಳು ಜಾನುವಾರುಗಳಲ್ಲಿ ಕಂಡುಬಂದಿರುವುದಿಲ್ಲ. ಈ ರೀತಿ ಕಠಿಣವಾದ ರೋಗ ನಿಯಂತ್ರಣ ಕಾರ್ಯಕ್ರಮಗಳಿಂದ ಜಾನುವಾರುಗಳನ್ನು ವಿವಿಧ ರೋಗಗಳಿಂದ ರಕ್ಷಿಸಲಾಗುತ್ತಿದೆ.<br><br>ವರ್ಷವಾರು ಹಾಲಿನ ಸಂಗ್ರಹಣೆ, ಮಾಂಸ ಹಾಗೂ ಮೊಟ್ಟೆಗಳ ಉತ್ಪಾದನೆಗಳ ಅಂಕಿ ಅಂಶಗಳು ಈ ಕೆಳಕಂಡಂತಿರುತ್ತವೆ. |

**ಮೂರು ವರ್ಷಗಳಲ್ಲಿ ರಾಜ್ಯದ ಹಾಲು ಮಹಾ ಮಂಡಳದ ಪ್ರತಿದಿನದ ಸರಾಸರಿ ಹಾಲು ಸಂಗ್ರಹಿಸಿದ ವಿವರ:**

| ಕ್ರ. ಸಂ | ವರ್ಷ | ಸರಾಸರಿ ಹಾಲು ಸಂಗ್ರಹಣೆ (ಕೆ.ಜಿ. / ದಿನ) |
|---|---|---|
| 1 | 2023-24 | 82.92 ಲಕ್ಷ |
| 2 | 2024-25 | 88.07 ಲಕ್ಷ |
| 3 | 2025-26 (ಜನವರಿ–2026 ರವರೆಗೆ) | 1 ಕೋಟಿ |

**ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಮೊಟ್ಟೆ ಮತ್ತು ಮಾಂಸದ ವಾರ್ಷಿಕ ಉತ್ಪಾದನಾ ವಿವರ**

| ಕ್ರ. ಸಂ | ವರ್ಷ | ಮೊಟ್ಟೆ ಉತ್ಪಾದನೆ (ಲಕ್ಷಗಳಲ್ಲಿ) | ಮಾಂಸ ಉತ್ಪಾದನೆ (ಟನ್ ಗಳಲ್ಲಿ) |
|---|---|---|---|
| 1 | 2022-23 | 90087 | 433306 |
| 2 | 2023-24 | 94591 | 454000 |
| 3 | 2024-25 | 99474 | 451660 |

| | | |
|---|---|---|
| | | ಮೇಲೆ ವಿವರಿಸಿದಂತೆ, ವರ್ಷದಿಂದ ವರ್ಷಕ್ಕೆ ಹಾಲು, ಮೊಟ್ಟೆ, ಮತ್ತು ಮಾಂಸದ ಉತ್ಪಾದನೆಗಳು ಹೆಚ್ಚಳವಾಗಿರುವುದರಿಂದ ಹೈನುಗಾರಿಕೆ ಮತ್ತು ಪಶುಸಂಗೋಪನೆಯಲ್ಲಿ ತೊಡಗಿರುವ ರೈತರಿಗೆ ಆರ್ಥಿಕವಾಗಿ ಅನುಕೂಲವಾಗಿರುತ್ತದೆ. |

**(ಸಂಖ್ಯೆ: ಪಸಂಮೀ 38 ಸಲೆವಿ 2026)**

**(ಕೆ.ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 99(937+951+972)

ಅನುಬಂಧ-1

ರಾಜ್ಯದಲ್ಲಿನ ಪಶು ಆಸ್ಪತ್ರೆಗಳು/ ಪಶುಚಿಕಿತ್ಸಾಲಯಗಳು/ಪ್ರಾಥಮಿಕ ಪಶುಚಿಕಿತ್ಸಾಲಯ ಕೇಂದ್ರಗಳಲ್ಲಿನ ಪಶುವೈದ್ಯರು ಹಾಗೂ ಪಶುವೈದ್ಯ ಪರೀಕ್ಷಕರು ಮತ್ತು ಸಹಾಯಕ ಸಿಬ್ಬಂದಿಗಳ ಹುದ್ದೆಗಳ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | ಪಶುವೈದ್ಯರು | | | | ಪಶುವೈದ್ಯ ಪರೀಕ್ಷಕರು ಮತ್ತು ಸಹಾಯಕ ಸಿಬ್ಬಂದಿಗಳು | | | | ಒಟ್ಟು | | | |
|---|---|---|---|---|---|---|---|---|---|---|---|---|---|
| 1 | 2 | 8 | 9 | 10 | 11 | 12 | 13 | 14 | 15 | 16 | 17 | 18 | 19 |
| | | ಮಂ | ಭ | ಗುತ್ತಿಗೆ ಪಶುವೈದ್ಯಾಧಿಕಾರಿ ಹುದ್ದೆ | ಖಾ | ಮಂ | ಭ | ಹೊರ ಗುತ್ತಿಗೆ | ಖಾ | ಮಂ | ಭ | ಗುತ್ತಿಗೆ /ಹೊರ ಗುತ್ತಿಗೆ | ಖಾ |
| 1 | ಬೆಂಗಳೂರು ನಗರ | 68 | 66 | 0 | 2 | 235 | 133 | 28 | 74 | 303 | 199 | 28 | 76 |
| 2 | ಬೆಂಗಳೂರು ಗ್ರಾಮಾಂತರ | 82 | 76 | 3 | 3 | 322 | 104 | 58 | 160 | 404 | 180 | 61 | 163 |
| 3 | ಬೆಂಗಳೂರು ದಕ್ಷಿಣ | 88 | 64 | 4 | 20 | 380 | 107 | 84 | 189 | 468 | 171 | 88 | 209 |
| 4 | ತುಮಕೂರು | 179 | 128 | 21 | 30 | 787 | 240 | 175 | 372 | 966 | 368 | 196 | 402 |
| 5 | ಚಿತ್ರದುರ್ಗ | 92 | 54 | 17 | 21 | 486 | 182 | 93 | 211 | 578 | 236 | 110 | 232 |
| 6 | ಕೋಲಾರ | 93 | 54 | 20 | 19 | 356 | 63 | 70 | 223 | 449 | 117 | 90 | 242 |
| 7 | ಚಿಕ್ಕಬಳ್ಳಾಪುರ | 95 | 21 | 14 | 60 | 136 | 25 | 29 | 82 | 231 | 46 | 43 | 142 |
| 8 | ದಾವಣಗೆರೆ | 100 | 78 | 16 | 6 | 481 | 139 | 111 | 231 | 581 | 217 | 127 | 237 |
| 9 | ಶಿವಮೊಗ್ಗ | 119 | 73 | 20 | 26 | 537 | 142 | 115 | 280 | 656 | 215 | 135 | 306 |
| 10 | ಮೈಸೂರು | 137 | 100 | 12 | 25 | 611 | 240 | 250 | 121 | 748 | 340 | 262 | 146 |
| 11 | ಮಂಡ್ಯ | 151 | 60 | 21 | 70 | 683 | 231 | 137 | 315 | 834 | 291 | 158 | 385 |
| 12 | ಚಾಮರಾಜನಗರ | 57 | 14 | 5 | 38 | 263 | 86 | 77 | 100 | 320 | 100 | 82 | 138 |
| 13 | ಚಿಕ್ಕಮಗಳೂರು | 110 | 59 | 18 | 33 | 446 | 160 | 97 | 189 | 556 | 219 | 115 | 222 |
| 14 | ಹಾಸನ | 153 | 73 | 13 | 67 | 691 | 215 | 185 | 291 | 844 | 288 | 198 | 358 |
| 15 | ದಕ್ಷಿಣ ಕನ್ನಡ | 67 | 26 | 4 | 37 | 348 | 38 | 94 | 216 | 415 | 64 | 98 | 253 |
| 16 | ಉಡುಪಿ | 53 | 23 | 6 | 24 | 272 | 28 | 67 | 177 | 325 | 51 | 73 | 201 |
| 17 | ಮಡಿಕೇರಿ | 43 | 12 | 5 | 26 | 227 | 36 | 49 | 142 | 270 | 48 | 54 | 168 |
| 18 | ಬೆಳಗಾವಿ | 211 | 113 | 22 | 76 | 859 | 351 | 162 | 346 | 1070 | 464 | 184 | 422 |
| 19 | ಉತ್ತರ ಕನ್ನಡ | 125 | 23 | 14 | 88 | 456 | 88 | 129 | 239 | 581 | 111 | 143 | 327 |
| 20 | ಹಾವೇರಿ | 101 | 38 | 10 | 53 | 457 | 100 | 101 | 256 | 558 | 138 | 111 | 309 |
| 21 | ಧಾರವಾಡ | 73 | 39 | 8 | 26 | 349 | 130 | 81 | 138 | 422 | 169 | 89 | 164 |
| 22 | ಬಾಗಲಕೋಟೆ | 110 | 54 | 13 | 43 | 450 | 203 | 110 | 137 | 560 | 257 | 123 | 180 |
| 23 | ಗದಗ | 81 | 15 | 11 | 55 | 277 | 80 | 76 | 121 | 358 | 95 | 87 | 176 |
| 24 | ವಿಜಯಪುರ | 93 | 65 | 10 | 18 | 448 | 219 | 97 | 132 | 541 | 284 | 107 | 150 |
| | ಒಟ್ಟು | **2481** | **1328** | **287** | **866** | **10557** | **3340** | **2475** | **4742** | **13038** | **4668** | **2762** | **5608** |
| 25 | ಬಳ್ಳಾರಿ | 49 | 10 | 9 | 30 | 176 | 52 | 35 | 89 | 225 | 62 | 44 | 119 |
| 26 | ವಿಜಯನಗರ | 84 | 43 | 13 | 28 | 302 | 102 | 48 | 152 | 386 | 145 | 61 | 180 |
| 27 | ಕೊಪ್ಪಳ | 73 | 22 | 6 | 43 | 263 | 92 | 57 | 114 | 336 | 114 | 65 | 157 |
| 28 | ಬೀದರ್ | 116 | 105 | 11 | 0 | 359 | 149 | 93 | 117 | 475 | 254 | 104 | 117 |
| 29 | ಯಾದಗಿರಿ | 59 | 18 | 10 | 31 | 305 | 138 | 71 | 96 | 364 | 156 | 81 | 127 |
| 30 | ರಾಯಚೂರು | 89 | 28 | 11 | 50 | 333 | 103 | 85 | 145 | 422 | 131 | 96 | 195 |
| 31 | ಕಲಬುರಗಿ | 150 | 99 | 18 | 33 | 677 | 321 | 135 | 221 | 827 | 420 | 153 | 254 |
| | **ಕಲ್ಯಾಣ ಕರ್ನಾಟಕ ಒಟ್ಟು** | **620** | **325** | **80** | **215** | **2415** | **957** | **524** | **934** | **3035** | **1282** | **604** | **1149** |
| | **Grand Total** | **3101** | **1653** | **367** | **1081** | **12972** | **4297** | **2999** | **5676** | **16073** | **5950** | **3366** | **6757** |

ನಿರ್ದೇಶಕರು,
ಪಶುಪಾಲನಾ ಇಲಾಖೆ,
ಬೆಂಗಳೂರು

## ಅನುಬಂಧ-2

### ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ 99(937+951+972)

### ರಾಜ್ಯದಲ್ಲಿ ಪಶುವೈದ್ಯರು ಹಾಗೂ ಪಶುವೈದ್ಯ ಪರೀಕ್ಷಕರು ಮತ್ತು ಸಹಾಯಕ ಸಿಬ್ಬಂದಿಗಳು ಇಲ್ಲದಿರುವ ಪಶುವೈದ್ಯಕೀಯ ಸಂಸ್ಥೆಗಳ ಜಿಲ್ಲಾವಾರು ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | ಒಟ್ಟು ಸಂಸ್ಥೆಗಳು |
|---|---|---|
| 1 | ಬೆಂಗಳೂರು ನಗರ | 3 |
| 2 | ಬೆಂಗಳೂರು ಗ್ರಾಮಾಂತರ | 3 |
| 3 | ಬೆಂಗಳೂರು ದಕ್ಷಿಣ | 18 |
| 4 | ತುಮಕೂರು | 27 |
| 5 | ಚಿತ್ರದುರ್ಗ | 29 |
| 6 | ಕೋಲಾರ | 25 |
| 7 | ಚಿಕ್ಕಬಳ್ಳಾಪುರ | 16 |
| 8 | ದಾವಣಗೆರೆ | 24 |
| 9 | ಶಿವಮೊಗ್ಗ | 41 |
| 10 | ಮೈಸೂರು | 29 |
| 11 | ಮಂಡ್ಯ | 49 |
| 12 | ಚಾಮರಾಜನಗರ | 26 |
| 13 | ಚಿಕ್ಕಮಗಳೂರು | 16 |
| 14 | ಹಾಸನ | 37 |
| 15 | ದಕ್ಷಿಣ ಕನ್ನಡ | 53 |
| 16 | ಉಡುಪಿ | 49 |
| 17 | ಮಡಿಕೇರಿ | 38 |
| 18 | ಬೆಳಗಾವಿ | 34 |
| 19 | ಹಾವೇರಿ | 52 |
| 20 | ಧಾರವಾಡ | 28 |
| 21 | ಗದಗ | 31 |
| 22 | ವಿಜಯಪುರ | 11 |
| 23 | ಬಳ್ಳಾರಿ | 19 |
| 24 | ವಿಜಯನಗರ | 20 |
| 25 | ಕೊಪ್ಪಳ | 20 |
| 26 | ಯಾದಗಿರಿ | 8 |
| 27 | ರಾಯಚೂರು | 28 |
| 28 | ಕಲಬುರಗಿ | 5 |
| 29 | ಬಾಗಲಕೋಟೆ | 23 |
| 30 | ಉತ್ತರ ಕನ್ನಡ | 63 |
| 31 | ಬೀದರ್ | 0 |
| | ಒಟ್ಟು | **825** |

ಪಶುವೈದ್ಯರು ಹಾಗೂ ತಾಂತ್ರಿಕ ಸಿಬ್ಬಂದಿಗಳು ಇಲ್ಲದಿರುವ ಒಟ್ಟು 825 ಪಶುವೈದ್ಯಕೀಯ ಸಂಸ್ಥೆಗಳಿದ್ದು, ಈ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹತ್ತಿರದ ಪಶುವೈದ್ಯಕೀಯ ಸಂಸ್ಥೆಗಳಲ್ಲಿನ ಪಶುವೈದ್ಯರು ಮತ್ತು ಸಹಾಯಕ ಸಿಬ್ಬಂದಿಗಳನ್ನು ಅಧಿಕ ಪ್ರಭಾರ ವ್ಯವಸ್ಥೆ ಮಾಡಿದ್ದು ಹಾಗೂ ಸಂಚಾರಿ ಪಶು ಚಿಕಿತ್ಸಾಲಯ (ಪಶು ಸಂಜೀವಿನಿ) ಮುಖಾಂತರ ರೈತರ ಮನೆ ಬಾಗಿಲಿಗೆ ತೆರಳಿ ಜಾನುವಾರುಗಳಿಗೆ ಯಾವುದೇ ವ್ಯತ್ಯಯವಾಗದಂತೆ ಚಿಕಿತ್ಸೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ನಿರ್ದೇಶಕರು